**ಕರ್ನಾಟಕ ವಿಧಾನ ಪರಿಷತ್ತು**

**140ನೇ ಅಧಿವೇಶನ**

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 33 (289) |
| ಮಾನ್ಯ ಸದಸ್ಯರ ಹೆಸರು | : | ಶ್ರೀ.ತಿಪ್ಪಣ್ಣ ಕಮಕನೂರ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 04-03-2020 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು, (ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ) |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡದಲ್ಲಿನ ಕಾಗಿಣಾ ಸೇತುವೆಯು ಪ್ರವಾಹದಿಂದಾಗಿ ಮುಳುಗಿ ಸಂಚಾರ ಸ್ಥಗಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ಬಂದಿದೆ. |
| ಆ) | ಬಂದಿದ್ದಲ್ಲಿ ಹೊಸ ಸೇತುವೆ ನಿರ್ಮಾಣ ಮಾಡಲು ಸರ್ಕಾರ ನಿರ್ಧರಿಸಿದೆಯೇ: ನಿರ್ಧರಿಸಿದ್ದಲ್ಲಿ, ಹೊಸ ಸೇತುವೆ ನಿರ್ಮಾಣದ ಸಂಪೂರ್ಣ ವಿವರಗಳನ್ನು ನೀಡುವುದು: | ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡದಲ್ಲಿನ ಕಾಗಿಣಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಲು ನಿರ್ಧರಿಸಿ, ಸರ್ಕಾರದ ಆದೇಶ ಸಂಖ್ಯೆ: ಲೋಇ 34 ಇಎಪಿ 2014, ಬೆಂಗಳೂರು, ದಿನಾಂಕ: 31-01-2017 ರಲ್ಲಿ ರಾಜ್ಯದಲ್ಲಿ ಪ್ರಮುಖ ರಸ್ತೆಗಳನ್ನು ಜೋಡಿಸುವ 195 ಸೆತುವೆಗಳನ್ನು ಒಟ್ಟಾರೆ ರೂ.1395.58 ಕೋಟಿಗಳ ರೇಖಾ ಅಂದಾಜು ಮೊತ್ತದಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br><br>ನಂತರ, 195 ಸೇತುವೆಗಳಲ್ಲಿ ಕಲಬುರಗಿ ಜಿಲ್ಲೆಯ, ಸದರಿ ತಾಲ್ಲೂಕಿನ ಮಳಖೇಡ ಗ್ರಾಮದ ಹತ್ತಿರ ಕಾಗಿಣಾ ನದಿಗೆ ಅಡ್ಡಲಾಗಿ ಹಳೆ ಸೇತುವೆಯ ಬದಲಾಗಿ ಹೊಸ ಸೇತುವೆ ನಿರ್ಮಾಣ ಕಾಮಗಾರಿಯನ್ನು ಪ್ಯಾಕೇಜ್-1ರ ಅಡಿಯಲ್ಲಿ ರೂ. 26.01 ಕೋಟಿಗಳಿಗೆ M/s. NCC Limited, ಬೆಂಗಳೂರು ರವರಿಗೆ ಗುತ್ತಿಗೆ ವಹಿಸಿ. ದಿನಾಂಕ:08-03-2018 ರಂದು ಗುತ್ತಿಗೆ ಕರಾರು ಮಾಡಿಕೊಳ್ಳಲಾಗಿದೆ, ಸೇತುವೆ ಕಾಮಗಾರಿಯ ಅವಧಿಯನ್ನು 30 ತಿಂಗಳುಗಳಿಗೆ ನಿಗಧಿಪಡಿಸಲಾಗಿದೆ. ಸದರಿ ಸೇತುವೆಯ ಕಾಮಗಾರಿ ಪ್ರಾರಂಭ ದಿನಾಂಕ:19-03-2018 ಹಾಗೂ ನಿಗಧಿತ ಕಾಮಗಾರಿ ಮುಕ್ತಾಯ ದಿನಾಂಕ:18-09-2020. ಸದರಿ ಸೇತುವೆ ಕಾಮಗಾರಿಯ ಸಂಬಂಧ ಗುತ್ತಿಗೆದಾರರು ಸಲ್ಲಿಸಿದ ವಿನ್ಯಾಸ ನಕ್ಷೆಗಳು ಅನುಮೋದನೆಗೊಂಡಿದ್ದು, ಕಾಮಗಾರಿ ಪ್ರಗತಿಯಲ್ಲಿದ್ದು ಭಾಗಶಃ ಅಡಿಪಾಯ ಪೂರ್ಣಗೊಂಡಿದ್ದು ಹಾಗೂ ಇತರೆ ಸಬ್ ಸ್ಟ್ರಕ್ಚರ್ ಕಾಮಗಾರಿ ಪ್ರಗತಿಯಲ್ಲಿದೆ. |
| ಇ) | ಹೊಸ ಸೇತುವೆ ಮಂಜೂರಾಗಿದ್ದರೆ ಕಾಮಗಾರಿ ಯಾವ ಹಂತದಲ್ಲಿದೆ: (ವಿವರ ನೀಡುವುದು) | ಹೊಸ ಸೇತುವೆ ಕಾಮಗಾರಿ ಮಂಜೂರಾಗಿದ್ದು, ಪ್ರಸ್ತುತ ಸೇತುವೆ ಕಾಮಗಾರಿ ಪ್ರಗತಿಯಲ್ಲಿದ್ದು, ಇದುವರೆಗೆ ಸಾಧಿಸಿರುವ ಪ್ರಗತಿ ವಿವರಗಳು ಕೆಳಕಂಡಂತಿರುತ್ತದೆ.<br><br>• ಒಟ್ಟು 12 ಅಡಿಪಾಯಗಳು (3 ತೆರದ ಅಡಿಪಾಯ ಹಾಗೂ 9 ಪೈಲ್ ಅಡಿಪಾಯ ) ಗಳಲ್ಲಿ 3 ತೆರದ ಅಡಿಪಾಯಗಳಾದ A1, |

| | | |
|---|---|---|
| | | P1 & P2 ಗಳು ಮತ್ತು ಪಿಯರ್ ಲಿಫ್ಟ್ ಕಾಂಕ್ರೀಟ್ ಕೆಲಸ ಪೂರ್ಣಗೊಂಡಿದೆ.<br>• ಪೈಲ್ ಅಡಿಪಾಯಗಳಾದ P7, P8, P9 & P10 ಗಳ ಪೈಲ್ ಕಾಂಕ್ರೀಟ್ ಕೆಲಸ ಪೂರ್ಣಗೊಂಡಿದೆ ಹಾಗೂ P3 & P4 ಪೈಲ್ ಮತ್ತು A1-ತಡೆಗೋಡೆ ಕಾಂಕ್ರೀಟ್ ಪ್ರಗತಿಯಲ್ಲಿದೆ.<br>• ಕಳೆದ ವರ್ಷ ಮಳೆ ಹಾಗೂ ಅತಿವೃಷ್ಟಿಯಿಂದಾಗಿ P5, P6 & A2 ಪೈಲ್ ಅಡಿಪಾಯ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ.<br>• ಒಟ್ಟಾರೆ 44 ಪಿಎಸ್‌ಸಿ ಗರ್ಡರ್‌ಗಳಲ್ಲಿ 15 ಗರ್ಡರ್‌ಗಳ ಉಕ್ಕಿನ ಕಟ್ಟುವಿಗೆ ಕಾರ್ಯ ಪ್ರಗತಿಯಲ್ಲಿದೆ.<br>• ಸದರಿ ಸೇತುವೆಯ ಕಾಮಗಾರಿಯು ದಿ: 18-09-2020 ರಲ್ಲಿ ಮುಕ್ತಾಯವಾಗುವ ಗುರಿಯಿದೆ. |
| ಈ) | ಕಲಬುರಗಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಸರ್ಕಾರಿ ನೌಕರರ ವಸತಿಗಳನ್ನು ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ.<br>ಲೋಕೋಪಯೋಗಿ ಇಲಾಖೆಯಿಂದ 2016-17 ನೇ ಸಾಲಿನ ಕಟ್ಟಡಗಳ ಅಪೆಂಡಿಕ್ಸ್-ಇ ಅಡಿಯಲ್ಲಿ ಕಲಬುರಗಿ ಉಪ ವಿಭಾಗಕ್ಕೆ ಮಂಜೂರಾದ 8 ಕಾಮಗಾರಿಗಳನ್ನು ನಿರ್ಮಿಸಲಾಗುತ್ತಿದೆ. |
| ಉ) | ಈ ಕಟ್ಟಡಗಳಿಗಾಗಿ ಖರ್ಚು ಮಾಡಿರುವ ಅನುದಾನ ಎಷ್ಟು: | ಸದರಿ 8 ಕಟ್ಟಡಗಳಿಗೆ ಒಟ್ಟು ಅಂದಾಜು ಮೊತ್ತ ರೂ. 3625.00 ಲಕ್ಷಕ್ಕೆ ಅನುಮೋದನೆಯಾಗಿರುತ್ತವೆ. ಸದರಿ ಕಾಮಗಾರಿಗಳ ಗುತ್ತಿಗೆ ಮೊತ್ತ ರೂ. 4078.60 ಲಕ್ಷ ಹಾಗೂ ಪ್ರಸ್ತುತ ಒಟ್ಟು ವೆಚ್ಚ ರೂ. 3519.87 ಲಕ್ಷ ಮಾಡಲಾಗಿರುತ್ತದೆ. |
| ಊ) | ಈ ಕಟ್ಟಡಗಳು ಪೂರ್ಣಗೊಂಡ ನಂತರ ಎಷ್ಟು ಜನ ಸರ್ಕಾರಿ ನೌಕರರಿಗೆ ವಸತಿ ಗೃಹಗಳು ಲಭ್ಯವಾಗಲಿವೇ? (ಮಾಹಿತಿ ನೀಡುವುದು) | ಲೋಕೋಪಯೋಗಿ ಇಲಾಖೆ ವತಿಯಿಂದ ನಿರ್ಮಾಣಗೊಂಡ ಕಟ್ಟಡಗಳಲ್ಲಿ ಒಟ್ಟು 180 ನೌಕರರಿಗೆ ವಸತಿ ಗೃಹಗಳು ಲಭ್ಯವಾಗಲಿವೆ. ವಿವರ ಅನುಬಂಧದಲ್ಲಿ ಒದಗಿಸಿದೆ. |

ಸಂಖ್ಯೆ. ಲೋಇ E-33 ಇಎಪಿ 2020

(ಗೋವಿಂದ ಎಂ. ಕಾರಜೋಳ)
ಮಾನ್ಯ ಉಪ ಮುಖ್ಯಮಂತ್ರಿಗಳು,
(ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ)

# ಅನುಬಂಧ

## ಲೋಕೋಪಯೋಗಿ ಇಲಾಖೆ ವತಿಯಿಂದ ನಿರ್ಮಾಣಗೊಂಡ ಕಟ್ಟಡಗಳಲ್ಲಿ ಒಟ್ಟು 180 ನೌಕರರಿಗೆ ಲಭ್ಯವಾಗುವ ವಸತಿ ಗೃಹಗಳ ವಿವರಗಳು.

| ಕ್ರಮ ಸಂ | ಕಾಮಗಾರಿ ಹೆಸರು | ಗೃಹಗಳ ಮಾದರಿ | ಸರ್ಕಾರಿ ನೌಕರರಿಗೆ ಲಭ್ಯವಾಗಲಿರುವ ವಸತಿ ಗೃಹಗಳ ಒಟ್ಟು ಸಂಖ್ಯೆ | ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ) | ಗುತ್ತಿಗೆ ಮೊತ್ತ ರೂ ಲಕ್ಷಗಳಲ್ಲಿ | ಗುತ್ತಿಗೆದಾರರ ಹೆಸರು | ಟೆಂಡರ್ ಪ್ರೀಮಿಯಂ | ಕಾಮಗಾರಿ ಪ್ರಾರಂಭಿಸಿದ ದಿನಾಂಕ | ಗುತ್ತಿಗೆ ಪ್ರಕಾರ ಮುಕ್ತಾಯಗೊಳಿಸಬೇಕಾದ ದಿನಾಂಕ | ಕಾಮಗಾರಿ ಮುಕ್ತಾಯಗೊಂಡ ದಿನಾಂಕ | ಕಾಮಗಾರಿ ಮುಕ್ತಾಯಗೊಳ್ಳಬಹುದಾದ ದಿನಾಂಕ | ಇಲ್ಲಿಯವರಗೆ ವೆಚ್ಚ (ರೂ ಲಕ್ಷಗಳಲ್ಲಿ) | ಪ್ರಸ್ತುತ ಹಂತ |
|---|---|---|---|---|---|---|---|---|---|---|---|---|---|
| 1. | ಕಲಬುರಗಿ ನಗರದಲ್ಲಿ ಜೇವರ್ಗಿ ಕಾಲೋನಿಯಲ್ಲಿ ಎ-ಮಾದರಿಯ ವಸತಿ ಗೃಹಗಳ (ಬ್ಲಾಕ್) ನಿರ್ಮಾಣ. (42 ವಸತಿಗೃಹಗಳು) | ಎ-ಮಾದರಿ | 52 | 700.00 | 772.47 | ಸಂಜೀವ ರೆಡ್ಡಿ ಪೆದ್ದೆ | (+)14.99% | 08.02.2018 | 07.01.2019 | 07.09.2019 | | 713.50 | ಕಾಮಗಾರಿ ಭೌತಿಕವಾಗಿ ಮುಗಿದಿದೆ |
| 2. | ಕಲಬುರಗಿ ನಗರದಲ್ಲಿ ಪ್ರವಾಸಿ ಮಂದಿರ ಆವರಣದಲ್ಲಿ (ಮಹಲ್-ಎ-ಶಾಹಿ) ಸರ್ಕಾರಿ ನೌಕರರ ಎ- ಮಾದರಿಯ ವಸತಿ ಗೃಹಗಳ ನಿರ್ಮಾಣ. (10 ವಸತಿಗೃಹಗಳು) | | | 150.00 | 170.55 | ಅನೀಲ್ ಪಾಂಡೇ | (+)14.99% | 08.02.2018 | 07.01.2019 | 07.01.2019 | | 178.63 | ಕಾಮಗಾರಿ ಮುಗಿದಿದೆ |
| 3. | ಕಲಬುರಗಿ ನಗರದಲ್ಲಿ ಜೇವರ್ಗಿ ಕಾಲೋನಿಯಲ್ಲಿ ಬಿ-ಮಾದರಿಯ ಸರ್ಕಾರಿ ನೌಕರರ ವಸತಿ ಗೃಹಗಳ ನಿರ್ಮಾಣ. (24 ವಸತಿಗೃಹಗಳು) | ಬಿ-ಮಾದರಿ | 48 | 600.00 | 681.26 | ಭೀಮ ಶಂಕರ ಪಾಟೀಲ್ | (+)14.99% | 28.02.2018 | 27.01.2019 | | 31.03.2020 | 437.48 | ಪೇಂಟಿಂಗ್ ಕೆಲಸ ಪ್ರಗತಿಯಲ್ಲಿದೆ. |
| 4. | ಕಲಬುರಗಿ ನಗರದಲ್ಲಿ ಐವಾನ್-ಎ-ಶಾಹಿ ಕಾಲೋನಿ ಆರವಣದಲ್ಲಿ ಬಿ- ಮಾದರಿಯ (ಬಹುಹಂತದ) ಸರ್ಕಾರಿ ನೌಕರರ ವಸತಿ ಗೃಹಗಳ ನಿರ್ಮಾಣ. (24 ವಸತಿಗೃಹಗಳು) | | | 550.00 | 629.41 | ಖಾಜಾ ಮಹಮೂದ್ ಪಟೇಲ್ | (+)14.99% | 08.02.2018 | 07.01.2019 | 07.07.2019 | | 648.37 | ಕಾಮಗಾರಿ ಭೌತಿಕವಾಗಿ ಮುಗಿದಿದೆ |
| 5. | ಕಲಬುರಗಿ ನಗರದಲ್ಲಿ ಜೇವರ್ಗಿ ಕಾಲೋನಿಯಲ್ಲಿ ಸಿ-ಮಾದರಿಯ ವಸತಿ ಗೃಹಗಳ (ಬ್ಲಾಕ್) ನಿರ್ಮಾಣ. (24 ವಸತಿಗೃಹಗಳು) | ಸಿ-ಮಾದರಿ | 32 | 550.00 | 631.56 | ಸಿರಾಜ ಗುಲಾಂ | (+)14.99% | 08.02.2018 | 07.01.2019 | 07.07.2019 | | 596.39 | ಕಾಮಗಾರಿ ಭೌತಿಕವಾಗಿ ಮುಗಿದಿದೆ |
| 6. | ಕಲಬುರಗಿ ನಗರದಲ್ಲಿ | | | 125.00 | 136.15 | ಅನೀಲ್ | (+)14.99% | 08.02.2018 | 07.01.2019 | 07.01.2019 | | 136.95 | ಕಾಮಗಾರಿ |

| | | | | | | | | | | | | | |
|---|---|---|---|---|---|---|---|---|---|---|---|---|---|
| | ಮಹಲ್-ಎ-ಶಾಹಿ ಐಬಿಟಿಬಿ ಅತಿಥಿ ಗೃಹದಲ್ಲಿ ಶಾಖಾಧಿಕಾರಿಗಳ ವಸತಿ ಗೃಹಗಳ ನಿರ್ಮಾಣ. (08 ವಸತಿಗೃಹಗಳು) | | | | | ಪಾಂಡೇ | | | | | | | ಮುಗಿದಿದೆ |
| 7. | ಕಲಬುರಗಿ ನಗರದಲ್ಲಿ ದೇವರ್ಗಿ ಕಾಲೋನಿಯಲ್ಲಿ ಡಿ-ಮಾದರಿಯ ವಸತಿ ಗೃಹಗಳ ನಿರ್ಮಾಣ. (24 ವಸತಿಗೃಹಗಳು) | ಡಿ-ಮಾದರಿ | 48 | 500.00 | 565.40 | ಭೀಮಶೆಟ್ಟಿ ಸಿ ಪಾರಾ | (+)14.99% | 08.02.2018 | 07.01.2019 | | 31.03.2020 | 309.06 | ಪೇಂಟಿಂಗ್ ಕೆಲಸ ಪ್ರಗತಿ ಯಲ್ಲಿದೆ. |
| 8. | ಕಲಬುರಗಿ ನಗರದಲ್ಲಿ ಜಿಲ್ಲಾ ಸರ್ಕಾರಿ ಆಸ್ಪತ್ರೆ ವೃತ್ತದ ಹತ್ತಿರ ಡಿ- ಮಾದರಿಯ ವಸತಿ ಗೃಹಗಳ ನಿರ್ಮಾಣ. (24 ವಸತಿಗೃಹಗಳು) | | | 450.00 | 491.80 | ಮಹಾಂತೇಶ್ ಬಳಗನೂರು | (+)14.99% | 08.02.2018 | 07.01.2019 | | 31.03.2020 | 499.49 | ಪೇಂಟಿಂಗ್ ಕೆಲಸ ಪ್ರಗತಿ ಯಲ್ಲಿದೆ. |
| | **ಒಟ್ಟು** | | **180** | **3625.00** | **4078.60** | | | | | | | **3519.87** | |

ಸೂಚನೆ:

| ಕ್ರ.ಸಂ | ಗೃಹಗಳ ಮಾದರಿ | ವಸತಿ ಗೃಹಗಳನ್ನು ಹಂಚಿಕೆ ಮಾಡುವ ನೌಕರರ ವೃಂದ | ಮಾದರಿ ಕಟ್ಟಡಗಳ ಪ್ಲಿಂತ್ ವಿಸ್ತೀರ್ಣ (ಚ.ಅಡಿಗಳಲ್ಲಿ) | ಕಟ್ಟಡ ಮಾದರಿ |
|---|---|---|---|---|
| 1. | ಇ-ಮಾದರಿ | ಎ-ಗ್ರೂಪ್ ಹಾಗೂ ಗ್ರೂಪ್-ಬಿ | 750.00 | 2-ಬಿ.ಹೆಚ್.ಕೆ |
| 2. | ಡಿ-ಮಾದರಿ | | 750.00 | 2-ಬಿ.ಹೆಚ್.ಕೆ |
| 3. | ಸಿ-ಮಾದರಿ | ಸಿ-ಗ್ರೂಪ್ | 558.00 | 2-ಬಿ.ಹೆಚ್.ಕೆ |
| 4. | ಬಿ-ಮಾದರಿ | ಸಿ-ಗ್ರೂಪ್ | 558.00 | 2-ಬಿ.ಹೆಚ್.ಕೆ |
| 5. | ಎ-ಮಾದರಿ | ಡಿ-ಗ್ರೂಪ್ | 443.00 | 1-ಬಿ.ಹೆಚ್.ಕೆ |